ನೋಟಿಸ್.

ತಾರೀಖು 17ನೇ ಡಿಶಂಬರ್ ಸ್ನ 1889ನೇ ಇಸವಿ.

ಸ್ನ 1878ನೇ ಇಸವಿ ಜ್ಯೂ. 8ನೇ ಮರ್ತುಮಿನ ಫಾರೆಸ್ಟ್ ರೂಲ್ಸ್ 13ನೇ ನಿಬಂಧನೆಗಳನ್ನನುಸರಿಸಿ ಇದರಿಂದ ಸರ್ವಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ; ಇದರಡಿ ನಮೂದಾದ ಪಂಕ್ತಿಯಿಂದ ಕಾಪಾಡಲ್ಪಟ್ಟ ತುಮಕೂರು ಡಿಸ್ಟ್ರಿಕ್ಟ್ ಸರ್ಕಾರಿ ಜಂಗಲಿಗಳನ್ನು ಮತ್ತು ಪ್ಲಾಂಟೇರ್ಷಗಳನ್ನು ಷಿಕಾರಿಗಳಿಗೂ ಆಂಬುಗಾರರು ಯಾ ಬ್ಯಾಟೆಗಾರ್ರಿಗೂ ಬಂದ ಮಾಡಲ್ಪಟ್ಟಿರುತ್ತೆ. ಯಾವ ವನುಷ್ಯ ಅಥವಾ ಮನುಷ್ಯರುಗಳಾಗಲಿ ಇನ್‌ಫಾರ್ಜ್ ಫಾರೆಸ್ಟ್ ಆಫಿಸರವರ ಲಿಖಿತ ಮೂಲಕ ಅಪ್ಪಣೆ ತಿವಾಯಿ ಆ್ವರ್ಜೆ ಜಂಗ್ಲಿಗಳಲ್ಲೂ ಮತ್ತು ಪ್ಲಾಂಟೇರ್ಷಗಳಲ್ಲೂ ಮೇಲ್ಕಂಡ ಬ್ಯಾಟೆ ವಗೈರೆ ಬಗ್ಯೆ ಪ್ರವೇಶ ಮಾಡಕೂಡದು.

	ಫಾರೆಸ್ಟ್ ವ ಪ್ಲಾಂಟೇರ್ಷ.		ತಾಲ್ಲೂಕು.
1.	ದೇವರಾಯದುರ್ಗ ಸ್ಪೇಷಲ್ ಫಾರೆಸ್ಟ್	..	ತುಮಕೂರು ತಾಲ್ಲೂಕು.
2.	ಮದ್ದಗಿರಿ ಡಿಟೋ	..	ಮದ್ದಗಿರಿ ತಾಲ್ಲೂಕು.
3.	ಹುಲಿಯೂರದುರ್ಗ ಡಿಟೋ	..	ಕುಣಿಗಲ್ ತಾಲ್ಲೂಕು.
4.	ಬುಕ್ಕಾಪಟ್ಟಣ ಡಿಟೋ	..	ಕೆಡಾ, ಗುಬ್ಬಿ, ಮತ್ತು ಹಿರಿಯೂರು ತಾ॥
5.	ಗೊಲ್ಲಹಳ್ಳಿ, ಮಲ್ಲಸಂದ್ರ ಪ್ಲಾಂಟೇರ್ಷ	..	ತುಮಕೂರು ತಾಲ್ಲೂಕು.
6.	ಬಳ್ಳಾಪುರ ಡಿಟೋ	..	ಡಿಟೋ
7.	ದಾಸರಹಳ್ಳಿ ಡಿಟೋ	..	ಡಿಟೋ
8.	ಲಿಂಗೇನಹಳ್ಳಿ ಡಿಟೋ	..	ಡಿಟೋ
9.	ಗಂಟಿಗೇನಹಳ್ಳಿಸಂದಲ್ ಡಿಟೋ	..	ಕೊರಟಿಗೆರೆ ಸಬ್ ತಾಲ್ಲೂಕು.
10.	ಹಾಲಕೆರೆ ಡಿಟೋ	..	ಕುಣಿಗಲ್ ತಾಲ್ಲೂಕು.

ಪ್ರತಿ ವರುಷ ಬಿಸಲುಕಾಲ ಅಂದರೆ ಫಿಬ್ರವರಿ ಗುರ್ರೆ ಲಾಗಾಯತು ಮೇ 31ರ ವರಿಗೆ ಮೇಲ್ಕಂಡ ಅಪ್ಪಣೆ ಕೊಡಲ್ಪಡುವದಿಲ್ಲವು.

ಎಲ್. ರಿಕ್ಕೆಟ್ಸ್,
ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್.

ಬೆಂಗಳೂರು ಡಿವಿಜ್.

ಪ್ರಸಿದ್ಧ ಪತ್ರಿಕೆ.

ತಾರೀಖು 5ನೇ ಡಿಸಂಬರ್ 1889.

ಸಕಲ ಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ತಿಳಿಯಪಡಿಸುವದೇನಂದರೆ,—ಬೆಂಗಳೂರಲ್ಲಿ ಹೊಸದಾಗಿ ತಯಾರಾಗತಕ್ಕ ರವಿನ್ಯೂ ಸರ್ವೆ ಆಫಿಸ್ ಕಾವಗಾರಿ ಕಂಟ್ರಾಕ್ಟಿಗಾಗಿ ಮೊಹರಾಗಿ ಬರುವ ದರಖಾಸ್ತುಗಳನ್ನು ಬೆಂಗಳೂರು ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರವರ ಆಫಿಸಿನಲ್ಲಿ ಬರುವ ಜನವರಿ 6ನೇ ತಾರೀಖು ಪರಿಯಂತರ ಹಿಡಿಯಲ್ಪಡುವದು.

ಸುಮಾರು ಅಂದಾಜು ಪರಿಮಾಣವನ್ನು ಈ ಕೆಳಗೆ ನಮೂದಿಸಿ ಯಿದೆ, ಈ ಪರಿಮಾಣವು ಗೊತ್ತಾದ್ದಲ್ಲಾ, ಕಾವಗಾರಿಯು 1891ನೇ ಇಸವಿ ಜ್ಯೂ ಆಖೈರಿಗೆ ಪೂರೈಸತಕ್ಕದ್ದು.

2. ಸ್ಯಾಂಕ್ಷನ್ ಅಂದಾಜು ಮತ್ತು ಷರತ್ತು ಇತರ ನಂಗತಿಗಳನ್ನು ಸಹ ದಿವಿ 11 ಘೆಂಟೆ ಲಾಗಾಯತು ಸಾಯಂಕಾಲ 5 ಘೆಂಟೆ ವರಿಗೆ ಬೆಂಗಳೂರು ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರ ಆಫಿಸಿನಲ್ಲಿ ನೋಡಬಹುದು.

3. ದರಖಾಸ್ತುಗಳು ಅಚ್ಚಿನ ನಮೂನೆಯಲ್ಲಿ ಯಿರಬೇಕು. ಈ ನಮೂನೆಯನ್ನು ಎಗ್ಜಿಕ್ಯೂಟಿವ್ ಇಂಜನಿಯರವರ ಆಫಿಸಿನಲ್ಲಿ ಪಡೆಯಬಹುದು. ಬಾಬುವಾರ್ ಕೆಲಸವನ್ನು ಯಾವ ಯಾವ ದರದಲ್ಲಿ ನಡಿಸಲ್ಪಡುವದೋ ಅದನ್ನು ತೋರಿಸಿ ಕೆಳಗೆ ಕೊಟ್ಟು ಯಿರುವ ಫಾರಮಿನಂತೆ ಒಂದು ಪಟ್ಟಿ ತಯಾರಿಯಿಂದ ದರಖಾಸ್ತಿನೊಡನೆ ಕಳುಹಿಸಿಕೊಡಬೇಕು.

4. ಪ್ರತಿ ದರಖಾಸ್ತುಗಳು ಪ್ರೊನೋಟ್ ಮೂಲಕವಾಗಲಿ ನಗದಾಗಲಿ 100 ರೂಪಾಯಿ ಡಿಪಾಜಿಟ್ಟನ್ನ ವಡಗೂಡಿ ಯಿರಬೇಕು. ಮತ್ತು ಬೆಂಗಳೂರಲ್ಲಿ ಹೊಸದಾಗಿ ತಯಾರಾಗುವ ರವಿನ್ಯೂ ಸರ್ವೆ ಆಫಿಸ್ ಕಾವಗಾರಿ ದರಖಾಸ್ತುಯೆಂತ ಲಿಫಾಫೇ ಮೇಲೆ ಬರಮಯಿರಬೇಕು. ಹೀಗೆ ಯಿಲ್ಲದೆ ಬರುವ ದರಖಾಸ್ತುಗಳನ್ನ ತಿರಸ್ಕರಿಸಲ್ಪಡುವದು.

5. ದರಖಾಸ್ತುಗಳನ್ನ ಅಂಗೀಕರಿಸತಕ್ಕದ್ದು ಚೀಫ್ ಇಂಜನಿಯರ್ ಸಾಹೆಬರವರದಾಗಿ ಯಿದೆ. ಅವರು ಕಮ್ಮಿ ದರ ವ ಇತರ ದರಖಾಸ್ತನ್ನು ಮಂಜೂರ್ಮಾಡುವನಕ್ಕೆ ವ ದರಖಾಸ್ತನ್ನು ಅನಂಗೀಕರಿಸುವದಕ್ಕೆ ಕಾರಣವನ್ನ ಹೇಳುವದಕ್ಕೆ ಬದ್ಧರಾಗಿ ಯಿರುವದಿಲ್ಲ.

6. ದರಖಾಸ್ತು ಮಂಜೂರ್ಮಾಡಿದ 8 ರೋಜುಗಳ ವಳಗಾಗಿ ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಕಂಟ್ರಾಕ್ಟು ಬಾಂಡನ್ನ ಬರದುಕೊಡತಕ್ಕದ್ದು ಆವಶ್ಯವಾಗಿ ಯಿದೆ. ಹೀಗೆ ಮಾಡದಿರುವ ನಂದರ್ಭದಲ್ಲಿ ದರಖಾಸ್ತು ರದ್ದು ಆದಹಾಗೆ ಭಾವಿಸಲ್ಪಡುವದಲ್ಲದೆ ದರಖಾಸ್ತುದಾರನು ತನ್ನ ಡಿಪಾಜಿಟ್ ಮೊಬಲಗನ್ನ ಹೋಗಲಾಡಿಸಿ ಕೊಳ್ಳುವನು.

7. ಯಾವ ದರಖಾಸ್ತು ಮಂಜೂರ್ಮಾಡಲ್ಪಡುವದೋ ಅಂಥಾ ದರಖಾಸ್ತುದಾರನ ಹೆಸರನ್ನು ಎಗ್ಜಿಕ್ಯೂಟಿವ್ ಇಂಜನಿಯರವರ ಆಫಿಸ್ ನೋಟಿಸ್ ಬೋರ್ಡಿನಲ್ಲಿ ಐಯಿಂದ ಚಿಕಟಾಯಿಸಲ್ಪಡುವದು.

8. ದರಖಾಸ್ತುಗಳ ವೈಕಿ ಬಂದು ದರಖಾಸ್ತು ಮಂಜೂರಾದ ಕೂಜ್ಲೆ ಆನಂಗೀಕಾರವಾದ ದರಖಾಸ್ತುಗಳ ಡಿಪಾಜಿಟ್ ಹಣವು ವಾಪಸ್ ಮಾಡಲ್ಪಡುವದು.

ಬಾಬುವಾರು.	ಅಂದಾಜಿಗೆ.	ದರ.	ಪರಿಮಾಣ.	ಸ್ಟೇಶನ್
ಪಾಯಬೋದೀ ಕೆಲಸ	ಸಲಿಗಜ		906	
ಕಲ್ಲು ಸುಂಣದಿಂದ ಪಾಯಪೂರ್ತಿ ಜೇಸ್ ಮಟ್ಟು ..	ಸಲಿಅಡಿ		16290	
ಇಟ್ಟಿಗೆ ಸುಂಣದಿಂದ ಗೋಡೆ	ಡಿಟೋ		26608	
ಡಿಟೋ ಕವರ್ಸ್ ಕೆಲಸ	ಡಿಟೋ		2430	
ಸದರೀ	ಡಿಟೋ		513	
ಸುಂಣದಿಂದ ಗಿಲಾವು	ಚದರ		469·84	
ಸುಂಣದಿಂದ ಸಂದುಗಾರೆ	ಡಿಟೋ		17·10	
ಸುಂಣ ಬಳಿಯುವದು	ಡಿಟೋ		196·90	
ಬಣ್ಣ ಬಳಿಯುವದು	ಡಿಟೋ		272·94	
ಕಾರ್ನೀಸ್ (ವಂದೂವರೆ ಅಡಿ ಹೂರಡಿಸುವದು)	ಲಾಂಬಿ ಅಡಿ		810	
ಡಿಟೋ (ವಂದು ಅಡಿ ಡಿಟೋ) ..	ಡಿಟೋ		320	
ಕಂಭಗಳ ತಲೆಸುತ್ತು ಕಾರ್ನೀಸ್	ಡಿಟೋ		208	
ಜನಲು ಸುತ್ತು ತೆರಣಿ	ಡಿಟೋ		10·44	
ವಜ್ಜಗಾರೆ	ಚದರ ಅಡಿ		84·54	
ತಾರನು	ಡಿಟೋ		217·74	
ತ್ಯಾಗದ ಮರದ ಕೆಲಸ	ಸಲಿಅಡಿ		2062	
ಮೆಟ್ಟಿಲ ಚಪ್ಪಡಿ	ಚದರಡಿ		128	
ಕದಗಳು	ಡಿಟೋ		832	
ಜನಲುಗಳು	ಡಿಟೋ		1120	
ಮೇಲೆ ಚಿಕ್ಕ ಜನಲುಗಳು	ಡಿಟೋ		336	
ಕನ್ನಡಿ ಅರ್ಧ ಕವರ್ಸ್ ಜನಲುಗಳು	ಡಿಟೋ		416	
ಬಿದರ ಚಾಪೆ ಜೆನ್ನು ತೆಪ್ಪೆಯಿಂದ ಮಾಡಿದ್ದು	ಡಿಟೋ		71·13	
ಮರದೆಂಣೆ ಕೆಲಸ				
ಜಿಂಕ್ ಕೊಳಾಯಿಗಳು				

ಟಿ. ಆರ್. ಸ್ಕಾಲ್ಡ್‌ವೆಲ್,
ಎಗ್ಜಿಕ್ಯೂಟಿವ್ ಇಂಜನಿಯರ್.

ಕೋಲಾರ ಡಿಸ್ಟ್ರಿಕ್ಟ್.

ತಾರೀಖು 9ನೇ ಡಿಸಂಬರ್ 1889.

ಗೋಲ್ಡ್‌ಮೈನ್ಸ್‌ಯಾನೆ ಭಂಗಾರ ಗಣಿಗಳಿಗೆ ಸಂಬಂಧ ಬಗ್ಗೆ.

ಇದರಿಂದ ತಿಳಿಯಪಡಿಸುವದೇನಂದರೆ—ಕೋಲಾರ ಡಿಸ್ಟ್ರಿಕ್ಟ್ ಬೌಂಡರಿಂಗ್‌ಪ್ಯಾಟಿ ಮತ್ತು ಮಾಲೂರು ತಾಲ್ಲೂಕುಗಳಿಗೆ ಕೀರಿದ ಕಾಮಸಂದ್ರದ ಜಂಗಲ್ ವೈಕಿ ಈ ಕೆಳಗೆ ವಿವರಿಸಲ್ಪಟ್ಟಿರುವ 3 ಮತ್ತು 4ನೇ ನಂಬರು ಬ್ಲಾಕುಗಳಲ್ಲಿ ಬಂದು ಆಥವಾ ಎರಡು ವರುಷಗಳ ವರಿಗೆ ಸವ್ರದೆ ಕಪದುಕೊಳ್ಳುವ ಪಕ್ಷನ್ನು ಅಪೇಕ್ಷಿಸತಕ್ಕವರಿಂದ ಪ್ರತಿ ಬಂದು ಬ್ಲಾಕಿಗೂ ೭ರೆಪೇರೆ ಬರುವ ಮೊಪರ್ ಮಾಡಿದ ದರ ಖಾಸ್ತುಗಳನ್ನು ಕೋಲಾರ ಡಿಸ್ಟ್ರಿಕ್ಟ್ ಹೆಪ್ಯುಟಿ ಕಮ್ಮಿಷನರ್ ಸಾಹೇಬರವರು 1890ನೇ ಇಸವಿ ಜನವರಿ 22ನೇ ತಾರೀಖಿನವರಿಗೆ ತೆಗದುಕೊಳ್ಳುವರು.—

2. ಈ ಪ್ರತಿ ಬಂದು ಬ್ಲಾಕಿನಿಂದ ಸಂಣ ಸಂಣ ತುಂಡುಗಳಾಗಿ ಕೊಯಿದು ವೇರಿಸಿದ 68 ಸಲೆ ಅಡಿಗಳುಳ್ಳ ಟೀ ಬಂದಕ್ಕೆ ಅಯಾ ದರಖಾಸ್ತುದಾರರು ಕೊಡಲು ಒಪ್ಪುವ ಸೀನಿಯರೇಜ್ ತೀರ್ವದು ಹೆಚ್ಚು ದರವನ್ನು ಅವರವರ ದರಖಾಸ್ತಿನಲ್ಲಿ ನಮೂದಿಸಿ ಇರಬೇಕು. ನಗದು ಅಥವಾ ನೋಟು ಮೂಲಕ (300) ರೂಪಾಯಿಗಳ ಡಿಪಾಜಿಟ್ ಮೊಬಲಗಿನ ಸಮೇತ ಬಾರದ ಇರುವ ದರಖಾಸ್ತುಗಳು ತೆಗದುಕೊಳ್ಳಲ್ಪಡುವದಿಲ್ಲ.